# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಮೇ 5 ರಂದು ದಕ್ಷಿಣ ಏಷ್ಯಾ ಉಪಗ್ರಹವನ್ನು ಇಸ್ರೋ ಶ್ರೀಹರಿಕೋಟಾದಿಂದ ಉಡಾಯಿಸಿತು. ಪಾಕಿಸ್ತಾನ ಹೊರತುಪಡಿಸಿ ದಕ್ಷಿಣ ಏಷ್ಯಾದ 7 ರಾಷ್ಟ್ರಗಳಿಗೆ ಸಂಪರ್ಕ, ವಿಪತ್ತು ನಿರ್ವಹಣೆ ಮೊದಲಾದ ವಿಷಯಗಳಲ್ಲಿ ಇದರಿಂದ ಅನುಕೂಲವಾದಲಿದೆ.


ಸಂಪುಟ : 38 ಸಂಚಿಕೆ : 19 ಹೇಮಲಂಬಿ–ವೈಶಾಖ ಕಲಿಯುಗಾಬ್ದ 5119 15–5–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಚೀನಾ: ಪಕ್ಕದಲ್ಲೇ ಇರುವ ಅಪಾಯಕಾರಿ ಶತ್ರು

ಕಳೆದ 10 ವರ್ಷಗಳಲ್ಲಿ ಚೀನಾ ಭಾರತದ ಸ್ನೇಹಿತನೆಂದು ಮಾತಿನಲ್ಲಿ ಹೇಳುತ್ತಲೇ ಬಂದಿದ್ದರೂ, ವ್ಯವಹಾರದಲ್ಲಿ ಮಾತ್ರ ಶತ್ರುದೇಶದಂತೆಯೇ ವರ್ತಿಸುತ್ತಿದೆ ಎಂಬುದು ಕೆಲವು ಉದಾಹರಣೆಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ.

- ಹಲವು ಸಂದರ್ಭಗಳಲ್ಲಿ ಭಾರತ ಭಯೋತ್ಪಾದನೆ ವಿಷಯದಲ್ಲಿ ವಿಶ್ವಸಂಸ್ಥೆಯಲ್ಲಿ ಮಾಡಿದ ಪ್ರಸ್ತಾವನೆಗಳನ್ನು ವಿರೋಧಿಸಿರುವುದು
- ಎನ್.ಎಸ್.ಜಿ(ನ್ಯೂಕ್ಲಿಯರ್ ಸಪ್ಲೈಯರ್ಸ್ ಗ್ರೂಪ್) ಅಂದರೆ ಪರಮಾಣು ಪೂರೈಕೆದಾರ ರಾಷ್ಟ್ರಗಳ ಗುಂಪಿಗೆ ಭಾರತ ಸೇರ್ಪಡೆಯಾಗುವುದಕ್ಕೆ ಅಡ್ಡಗಾಲು ಹಾಕಿರುವುದು
- ಭಾರತದ ವಿರೋಧವನ್ನು ಲೆಕ್ಕಿಸದೇ ಬ್ರಹ್ಮಪುತ್ರ ನದಿಗೆ ಅಣೆಕಟ್ಟು ಕಟ್ಟುವ ಪ್ರಯತ್ನ
- ಪಾಕ್ ಆಕ್ರಮಿತ ಜಮ್ಮು ಕಾಶ್ಮೀರದಲ್ಲಿ ಚೀನಾ ನಿರ್ಮಿಸುತ್ತಿರುವ ಹೆದ್ದಾರಿ, ರೈಲ್ವೆ ಮಾರ್ಗಗಳು
- ಹಲವು ಬಾರಿ ಭಾರತ–ಚೀನಾ ಗಡಿಯಲ್ಲಿ ಗಡಿ ಉಲ್ಲಂಘನೆ
- ಭಾರತದ ಮಗ್ಗುಲ ಮುಳ್ಳಾಗಿರುವ ಪಾಕಿಸ್ತಾನದ ಮಿಲಿಟರಿ ಮತ್ತು ಆರ್ಥಿಕ ನೆರವು
- ನೇಪಾಳ, ಶ್ರೀಲಂಕಾ, ಬಾಂಗ್ಲಾದೇಶ, ಮಾಲ್ಡೀವ್ಸ್ ಮೊದಲಾದ ದೇಶಗಳಿಗೆ ಉದಾರ ಆರ್ಥಿಕ ನೆರವಿನ ಮೂಲಕ ತನ್ನ ಪ್ರಭಾವ ವಿಸ್ತರಿಸಲು ಪ್ರಯತ್ನ
- ಭಾರತದೊಂದಿಗಿನ ಗಡಿ ವಿವಾದವನ್ನು ಸದಾ ಜೀವಂತವಾಗಿಟ್ಟಿರುವುದು. ಇತ್ತೀಚೆಗೆ, ಅರುಣಾಚಲಪ್ರದೇಶವನ್ನು ತನ್ನ ದೇಶದ ಭಾಗವೆಂದೇ ಭೂಪಟದಲ್ಲಿ ತೋರಿಸಿರುವುದು. ಅಲ್ಲಿನ ಸ್ಥಳಗಳಿಗೆ ಚೈನೀ ಭಾಷೆಯ ಹೆಸರಿಟ್ಟಿರುವುದು.

ವಾಸ್ತವವಾಗಿ ಹೇಳುವುದಾದರೆ, 1949ರಲ್ಲಿ ಕಮ್ಯುನಿಸ್ಟ್ ಆಡಳಿತ ಆರಂಭವಾದಾಗಿನಿಂದಲೂ ಚೀನಾ ಶತ್ರು ದೇಶದಂತೆಯೇ ನಡೆದುಕೊಳ್ಳುತ್ತಿದೆ. ಪಾಕಿಸ್ತಾನಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಎಲ್ಲಾ ರೀತಿಯ ಬೆಂಬಲ ನೀಡುತ್ತಿರುವುದು ಒಂದೆಡೆಯಾದರೆ, ತನ್ನ ಕುಟಿಲ ನೀತಿಗಳ ಮೂಲಕ ಭಾರತದ ಮೇಲೆ ಆರ್ಥಿಕ ಸಮರ ಸಾರಿರುವುದು ಇನ್ನೊಂದೆಡೆ. ಇಷ್ಟಾಗ್ಯೂ ಚೀನಾದಿಂದ ಭಾರತಕ್ಕೆ ಪ್ರತಿ ವರ್ಷ ಆಮದಾಗುತ್ತಿರುವ ಸರಕುಗಳ ಬೆಲೆ ಅಧಿಕೃತ ದಾಖಲೆಗಳ ಪ್ರಕಾರ ಸುಮಾರು 4.25 ಲಕ್ಷ ಕೋಟಿಗಳಷ್ಟು, ಆದರೆ ಎಲ್ಲರಿಗೂ ತಿಳಿದಿರುವ ವಿಷಯವೆಂದರೆ ಚೀನಾದಿಂದ ಆಮದಾಗುವ ವಸ್ತುಗಳ ಪೈಕಿ ಹಲವಷ್ಟು ಬಿಲ್ಲುಗಳಿಲ್ಲದೆ ಹಾಗೂ ಮತ್ತಷ್ಟು ಕಡಿಮೆ ಮೊತ್ತದ ನಕಲಿ ಬಿಲ್ಲುಗಳೊಂದಿಗೆ ಬರುತ್ತವೆ. ಹಾಗಾಗಿ ನಿಜವಾದ ಆಮದಿನ ಮೌಲ್ಯ 6ಲಕ್ಷ ಕೋಟಿಗೂ ಅಧಿಕ ಎಂದು ಅಂದಾಜಿಸಲಾಗಿದೆ. ಆದರೆ ನಾವು ಚೀನಾಕ್ಕೆ ರಫ್ತು ಮಾಡುತ್ತಿರುವ ಪದಾರ್ಥಗಳ ಮೌಲ್ಯ ಕೇವಲ 60 ಸಾವಿರ ಕೋಟಿಗಳಷ್ಟು ಮಾತ್ರ, ಅಂದರೆ ಅವರಿಗಿಂತ ಸುಮಾರು 7 ಪಟ್ಟು ಕಡಿಮೆ. ಇಂದು ಚೀನಾದಿಂದ ಭಾರತಕ್ಕೆ ಆಮದಾಗುವಷ್ಟು ಮೌಲ್ಯದ ಸರಕುಗಳು ಇನ್ನಾವ ದೇಶದಿಂದಲೂ ಆಮದಾಗುತ್ತಿಲ್ಲ. ಹೀಗಾಗಿ ಚೀನಾದಿಂದ ಬರುವ ಕಳಪೆ ಗುಣಮಟ್ಟದ ವಸ್ತುಗಳ ಹಾವಳಿಯಿಂದ ಭಾರತದ ಹಲವು ಉದ್ಯಮಗಳು ನಶಿಸಿಹೋಗುತ್ತಿವೆ ಹಾಗೂ ಸುಮಾರು ಒಂದು ಕೋಟಿ ಭಾರತೀಯರನ್ನು ನಿರುದ್ಯೋಗಿಗಳನ್ನಾಗಿದೆ.

ಚೀನಾದ ಉತ್ಪನ್ನಗಳನ್ನು ಹೆಚ್ಚು ಹೆಚ್ಚು ಬಳಸುತ್ತಾ ನಾವು ಅವರ ಆರ್ಥಿಕತೆಯನ್ನು ಬಲಪಡಿಸುತ್ತಿದ್ದೇವಲ್ಲದೇ ರೂಪಾಯಿ ಮೌಲ್ಯ ಕುಸಿಯುವುದಕ್ಕೂ ಕಾರಣರಾಗುತ್ತಿದ್ದೇವೆ. ನಾವು ಇನ್ನಾದರು ಎಚ್ಚೆತ್ತುಕೊಂಡು, ಎಲ್ಲಾ ವಿಚಾರಗಳಲ್ಲೂ ಭಾರತದ ಶತ್ರುವಿನಂತೆ ವ್ಯವಹರಿಸುವ ಚೀನಾದ ಸರಕುಗಳನ್ನು ಬಹಿಷ್ಕರಿಸುವ ಕೆಲಸ ಮಾಡದಿದ್ದರೆ ನಮ್ಮ ದೇಶದ ಆರ್ಥಿಕತೆಯ ಮೇಲೆ, ಉದ್ಯೋಗ ಸೃಷ್ಟಿಸಬಲ್ಲ ಉದ್ಯಮಗಳ ಮೇಲೆ ಸರಿಪಡಿಸಲಾಗದಂಥ ಗಂಭೀರ ಪರಿಣಾಮಗಳಾಗುವುದಂತೂ ಖಚಿತ.

### ಸಾಮಾನ್ಯ ನಾಗರೀಕರಾದ ನಾವೇನು ಮಾಡಬಹುದು?

- ಚೀನಾದ ವಸ್ತುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸುವುದು.
- ಚೀನಾ ಕಂಪನಿಗಳು ಹಾಗೂ ಚೀನಾದಿಂದ ತಯಾರಾಗಿ ಬರುವ ಪದಾರ್ಥಗಳಾವುವೆಂದು ತಿಳಿದು ಇನ್ನಿತರರೂ ಖರೀದಿಸದಂತೆ ಜಾಗೃತಿ ಮೂಡಿಸುವುದು.
- ವ್ಯಾಪಾರಿಗಳಿಗೂ ಚೀನಾ ವಸ್ತುಗಳನ್ನು ವ್ಯಾಪಾರ ಮಾಡದಂತೆ ಮನವಿ ಮಾಡುವುದು.
- ಈ ವಿಷಯವಾಗಿ ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಮೂಡಿಸುವುದು.
- ಚೀನಾ ವಸ್ತುಗಳ ಕಳಪೆ ಗುಣಮಟ್ಟದ ಹಾಗೂ ನಕಲಿ ಪದಾರ್ಥಗಳ (ಪ್ಲಾಸ್ಟಿಕ್ ಅಕ್ಕಿ, ಕಳಪೆ ಗುಣಮಟ್ಟದ ಕ್ಯಾನ್ಸರ್‌ಗೆ ಕಾರಣವಾಗಬಹುದಾದ ಪ್ಲಾಸ್ಟಿಕ್ ಆಟಿಕೆಗಳು) ಬಗ್ಗೆ ಜನಜಾಗೃತಿ
- ಸಾಮಾಜಿಕ ಜಾಲತಾಣಗಳಲ್ಲಿ ಚೀನಾದ ಕುಟಿಲತಂತ್ರಗಳ ಬಗ್ಗೆ ಬರೆಯುವುದು, ಅಂತಹ ಲೇಖನಗಳು ಹೆಚ್ಚು ಪ್ರಚಾರ ಮಾಡುವುದು. ಇದರಿಂದ ಚೀನಾದ ನಿಜ ಬಣ್ಣ ಹೆಚ್ಚು ಹೆಚ್ಚು ಜನರಿಗೆ ತಿಳಿಯುತ್ತದೆ.
- ನಮ್ಮ ಊರಿನಲ್ಲಿ, ಶಾಲೆ ಕಾಲೇಜುಗಳಲ್ಲಿ ಚೀನಾದಿಂದ ಇರುವ ಅಪಾಯಗಳ ಬಗ್ಗೆ ಭಾಷಣ ಏರ್ಪಡಿಸುವುದು.

ಕೇವಲ ಆರ್ಥಿಕತೆಯ ವಿಚಾರದಲ್ಲಷ್ಟೇ ಅಲ್ಲದೇ ಭಾರತಕ್ಕೆ ಚೀನಾದಿಂದಾಗುತ್ತಿರುವ ಇನ್ನಿತರ ರೀತಿಯ ತೊಂದರೆಗಳ ಸಂಕ್ಷಿಪ್ತ ಪಟ್ಟಿ ಈ ಕೆಳಗಿದೆ:

### ಪಾಕಿಸ್ತಾನದ ಪರವಹಿಸುತ್ತಾ ಬಹ್ಮಪುತ್ರ ನದಿಯ ನೀರನ್ನು ತಡೆದಿದ್ದು

ಪಾಕಿಸ್ತಾನದ ಭಯೋತ್ಪಾದಕರು ಬಾರಾಮುಲ್ಲಾ ಜಿಲ್ಲೆಯ ಉರಿಯಲ್ಲಿ ಭಾರತೀಯ ಸೇನಾ ಶಿಬಿರದ ಮೇಲೆ ಮಾಡಿದ ದಾಳಿಯ ಪ್ರತಿಕಾರವಾಗಿ ಭಾರತ ಸರ್ಜಿಕಲ್ ದಾಳಿ ನಡೆಸಿತು. ಅಲ್ಲದೆ ಪಾಕಿಸ್ತಾನದೊಂದಿಗಿನ 'ಸಿಂಧೂ ನದಿ ನೀರಿನ ಒಪ್ಪಂದ'ದ ಬಗ್ಗೆ ಪುನರ್ ವಿಮರ್ಶೆ ಮಾಡುವುದಾಗಿ ಹೇಳಿತ್ತು. ಅದೇ ಸಂದರ್ಭದಲ್ಲಿ ಚೀನಾ ಬ್ರಹ್ಮಪುತ್ರ ನದಿಯ ಪ್ರಮುಖ ಉಪನದಿಯಲ್ಲೊಂದಾದ ಝುಂಗ್ಬೋ ಎಂಬ ನದಿಯ ನೀರು ಭಾರತಕ್ಕೆ ಹರಿಯದಂತೆ ತಡೆಯುವ ಮೂಲಕ ತನ್ನ ಕುಟಿಲನೀತಿ ಪ್ರದರ್ಶಿಸಿತ್ತು.

### ಭಾರತದ ಮೇಲೆ ದಾಳಿ ಮಾಡುವ ಪಾಕ್ ಭಯೋತ್ಪಾದಕರ ಸಮರ್ಥನೆ

ವಿಶ್ವಸಂಸ್ಥೆಯಲ್ಲಿ ಮೌಲಾನ ಮಸೂದ್ ಅಝುರ್, ಲಖ್ವಿ, ಸಯ್ಯದ್ ಸಲಾವುದ್ದಿನ್‌ಮತ್ತಿತರ ಭಯೋತ್ಪಾದಕರ ವಿರುದ್ಧ ಭಾರತ ಪ್ರಸ್ತಾವನೆ ಮಂಡಿಸಿದಾಗಲೆಲ್ಲ ಅವರುಗಳ ಪರವಾಗಿ ವೀಟೋ ಬಳಕೆ ಮಾಡುವುದರ ಮೂಲಕ ತನ್ನ ನಿಜವಾದ ಭಾರತವಿರೋಧಿ ಮಾನಸಿಕತೆಯನ್ನು ತೋರಿಸುತ್ತಾ ಬಂದಿದೆ

ಭಯೋತ್ಪಾದಕ ಸಂಘಟನೆಗಳಾದ ಲಷ್ಕರ್ ಇ ತೈಬಾ, ಜಮಾತ್ ಉದ್ ದಾವ ಮತ್ತಿತರ ಸಂಘಟನೆಗಳ ವಿಷಯದಲ್ಲಿಯೂ ವಿಶ್ವಸಂಸ್ಥೆಯಲ್ಲಿ ವೀಟೋ ಬಳಕೆಯ ಮೂಲಕ ಹೀಗೆಯೆ ನಡೆದುಕೊಂಡಿದೆ.

### ಪದೇ ಪದೇ ಗಡಿಯಲ್ಲಿ ಭಾರತದ ಭೂಪ್ರದೇಶದಲ್ಲಿ ಅತಿಕ್ರಮಣ ಮಾಡುವ ಪ್ರಯತ್ನ

ವರ್ಷಕ್ಕೆ 300 ರಿಂದ 450 ಬಾರಿ ಗಡಿ–ಉಲ್ಲಂಘನೆ ಮಾಡುತ್ತಿದೆ ಚೀನಾ! ಅರುಣಾಚಲಪ್ರದೇಶ ಸೇರಿದಂತೆ ಭಾರತಕ್ಕೆ ಸೇರಿದ ಒಟ್ಟು 90,000 ಚದರ ಕಿಲೋಮೀಟರ್‌ಗಳಷ್ಟು ಜಾಗ ತನಗೆ ಸೇರಿದ್ದೆಂದು ವಾದಿಸುವ ಚೀನಾ, ಆ ಪ್ರದೇಶದಲ್ಲಿ ಭಾರತ ನಡೆಸುವ ಅಭಿವೃದ್ಧಿ ಕಾರ್ಯಗಳಿಗೆ ಆಗಾಗ ಅಡ್ಡಿಪಡಿಸುತ್ತಿರುತ್ತದೆ. ಭಾರತದೊಂದಿಗೆ ಒಟ್ಟು 4,057 ಕಿಲೋಮೀಟರ್ ಉದ್ದದ ಗಡಿ ಹೊಂದಿರುವ ಚೀನಾ ಈ ಸಂಪೂರ್ಣ ಪ್ರದೇಶಕ್ಕೂ ಸುಸಜ್ಜಿತವಾದ ರಸ್ತೆ, ರೈಲ್ವೇ ಸಂಪರ್ಕ, ವಿದ್ಯುತ್ ಸಂಪರ್ಕ ವ್ಯವಸ್ಥೆಯನ್ನು ಮಾಡಿಕೊಂಡಿದೆ. ಇದಲ್ಲದೆ ಭಾರತದ ಗಡಿಯಲ್ಲಿ ಪರಮಾಣು ಕ್ಷಿಪಣಿಯನ್ನು ಸಹ ನಿಯೋಜಿಸಿದೆ. ಇಷ್ಟೂ ಸಾಲದೆಂಬಂತೆ ನಮಗಿಂತ 5 ಪಟ್ಟು ಹೆಚ್ಚಿನ ರಕ್ಷಣಾ ಬಜೆಟ್ ಹೊಂದಿರುವ ಈ ದೈತ್ಯ, ಭಾರತದ ನಾಲ್ಕೂ ದಿಕ್ಕಿನಲ್ಲೂ ಅಂದರೆ ಪಾಕಿಸ್ತಾನ, ನೇಪಾಳ, ಮಯನ್ಮಾರ್, ಬಾಂಗ್ಲಾದೇಶ ಮತ್ತು ಶ್ರೀಲಂಕಾದಲ್ಲಿ ತನ್ನ ಸೇನಾ ಚಟುವಟಿಕೆಗಳನ್ನು ವಿಸ್ತರಿಸಿದೆ.

ತನ್ನ ನಕ್ಷೆಗಳಲ್ಲಿ ಅರುಣಾಚಲಪ್ರದೇಶ ಚೀನಾದ ಭಾಗವೆಂದು ತೋರಿಸಿಕೊಳ್ಳುತ್ತದೆ, ಅಲ್ಲಿಯವರನ್ನು ಪಾಸ್‌ಪೋರ್ಟ್, ವೀಸಾಗಳಾವುದೂ ಇಲ್ಲದಂತೆ ಚೀನಾಕ್ಕೆ ಭೇಟಿ ನೀಡುವ ಆಮಂತ್ರಣ ನೀಡುತ್ತದೆ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಅರುಣಾಚಲ 'ಭಾರತದ ಸೂರಜ ಪ್ರದೇಶ' ಎಂದಿದ್ದಕ್ಕೆ ರಾತ್ರಿ 2 ಘಂಟೆಗೆ ನಮ್ಮ ಮಹಿಳಾ ರಾಯಭಾರಿಯನ್ನು ನಿದ್ರೆಯಿಂದೆಬ್ಬಿಸಿ ಪ್ರಧಾನಿ ಹೇಳಿಕೆಯನ್ನು ಖಂಡಿಸಿದ್ದಲ್ಲದೇ, ಎಚ್ಚರಿಕೆಯನ್ನು ಸಹ ನೀಡಿತ್ತು. ಪ್ರಧಾನಿ ಮನಮೋಹನ್ ಸಿಂಗ್ ಅರುಣಾಚಲದ ತವಾಂಗ್ ಜಿಲ್ಲೆ ಪ್ರವೇಶಿಸದಂತೆ ಬೆದರಿಕೆ ಹಾಕಿತ್ತು. ಇದರಿಂದಾಗಿ ಪ್ರಧಾನಿ ತಮ್ಮ ತವಾಂಗ್ ಪ್ರವಾಸವನ್ನು ರದ್ದುಗೊಳಿಸುವಂತಾಗಿತ್ತು.

### ಪರಮಾಣು ಪೂರೈಕೆದಾರ ರಾಷ್ಟ್ರಗಳ ಗುಂಪಿನಲ್ಲಿ ಭಾರತದ ಸದಸ್ಯತ್ವಕ್ಕೆ ವಿರೋಧ


ಕೇವಲ ಚೀನಾದ ವಿರೋಧದಿಂದಾಗಿ ಉಳಿದೆಲ್ಲಾ ಸದಸ್ಯ ರಾಷ್ಟ್ರಗಳ ಸಮ್ಮತಿಯಿದ್ದರೂ ಭಾರತ ಈ ಸದಸ್ಯತ್ವದಿಂದ ಇಲ್ಲಿಯವರೆಗೂ ವಂಚಿತವಾಗಿದೆ.

### ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ಖಾಯಂ ಸದಸ್ಯತ್ವಕ್ಕೆ ವಿರೋಧ

1950ರಲ್ಲಿ ಚೀನಾಗೆ ಖಾಯಂ ಸದಸ್ಯತ್ವಕೊಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದೇ ಭಾರತ.(ಅಂದೇ ಭಾರತಕ್ಕೆ ಸಿಕ್ಕಿದ್ದ ಆ ಸ್ಥಾನವನ್ನು ನಿರಾಕರಿಸಿ ಅದನ್ನು ಚೀನಾಕ್ಕೆ ಕೊಡಿಸಿದ ಭಾರತದ ನಡೆ ಮೂರ್ಖತನವಲ್ಲದೇ ಮತ್ತೇನು?) ಆದರೆ ಇಂದು ಭಾರತ ಖಾಯಂ ಸದಸ್ಯತ್ವ ಪಡೆಯದಂತೆ ತಡೆಯುತ್ತಿರುವುದು ಅದೇ ಕೃತಘ್ನ ರಾಷ್ಟ್ರ ಚೀನಾ!

### ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಸೇನಾಜಮಾವಣೆ ಮತ್ತು ನಿರ್ಮಾಣ ಕಾರ್ಯ ನಡೆಸುತ್ತಿರುವುದು

1962 ರ ಯುದ್ಧದಲ್ಲಿ 38,000 ಚದರ ಕಿಲೋಮೀಟರ್‌ಗಳಷ್ಟು ಭೂಭಾಗವನ್ನು ಭಾರತದಿಂದ ಕಬಳಿಸಿತು ಚೀನಾ, ಇದಲ್ಲದೆ ಪಾಕ್ ಆಕ್ರಮಿತ ಪ್ರದೇಶದ 5,183 ಚದರ ಕಿಲೋಮೀಟರ್‌ಗಳಷ್ಟು ಭೂಭಾಗ ಚೀನಾ ಹಿಡಿತದಲ್ಲಿದೆ. ಇದಿಷ್ಟು ಸಾಲದೆಂಬಂತೆ 68,000 ಚದರ ಕಿಲೋಮೀಟರ್‌ಗಳಷ್ಟಿರುವ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಚೀನಾ–ಪಾಕ್ ಆರ್ಥಿಕ ಕಾರಿಡಾರ್ ಹೆಸರಿನಲ್ಲಿ ಭಾರತದ ವಿರೋಧವನ್ನೂ ಲೆಕ್ಕಿಸದೆ ತನ್ನ ಚಟುವಟಿಕೆಗಳ ಮೂಲಕ ಹಸ್ತಕ್ಷೇಪ ನಡೆಸುತ್ತಿದೆ.



**ಹೆಸರು :** ಹಳ್ಳಿಕಾರು

**ಮೂಲ :** ಕರ್ನಾಟಕದ ಮೈಸೂರು, ಮಂಡ್ಯ, ಹಾಸನ (ಹಳ್ಳಿಕಾರು ಪ್ರದೇಶ).

**ರೂಪ :** ಕಪ್ಪು, ಬಿಳಿ, ಬೂದು ಬಣ್ಣವನ್ನು ಹೊಂದಿವೆ. ಉದ್ದ ಕೋಡುಗಳನ್ನು ಹೊಂದಿವೆ. ಹೊಲಗಳಲ್ಲಿ ಕೆಲಸ ಮಾಡಬಲ್ಲ ಅತ್ಯುತ್ತಮ ತಳಿ.

**ವಿಶೇಷತೆ :** ಅಮೃತಮಹಲ್‌ನಂತೆಯೇ, ವಿಜಯನಗರದ ಅರಸರು, ಮೈಸೂರು ಅರಸರು ವಿಶೇಷ ಮುತುವರ್ಜಿ ವಹಿಸಿ ಸಂರಕ್ಷಿಸಿದ ತಳಿ.

**ಹಾಲಿನ ಪ್ರಮಾಣ :** ಒಂದು ಕರಾವಿನಲ್ಲಿ ಸರಾಸರಿ 600 ಲೀಟರ್

ಇಳಿ–ದೇಸಿ ಗೋ ತಳಿ

## ಎಲ್ಲೋ ಕೇಳಿದ ಕತೆ : ಶೀಲವೇ ಗೌರವದ ಮಾನದಂಡ, ಉಡುಗೆಯಲ್ಲ


ಕಾಷಾಯ ವಸ್ತ್ರಧಾರಿಯಾದ ಸ್ವಾಮಿ ವಿವೇಕಾನಂದರು ಅಮೇರಿಕದ ಶಿಕಾಗೋ ನಗರದ ಬೀದಿಯಲ್ಲಿ ಒಮ್ಮೆ ನಡೆದುಕೊಂಡು ಹೋಗುತ್ತಿದ್ದರು. ಖಾವಿ ಧರಿಸಿ ತಲೆಗೆ ರುಮಾಲು ಸುತ್ತಿದ್ದ ಅವರ ವೇಷ ಅಮೇರಿಕನ್ನರಿಗೆ ಕೌತುಕದ ವಸ್ತುವಾಗಿತ್ತು. ಕೆಲವರು ಅವರವರಲ್ಲೇ ಗುಸುಗುಸು ಗೇಲಿ ಮಾಡುತ್ತಿದ್ದರು. ಸ್ವಾಮೀಜಿಯವರ ಹಿಂದೆ ಬರುತ್ತಿದ್ದ ಓರ್ವ ಮಹಿಳೆ ಜೊತೆಗಿದ್ದ ಮುರುಷನ ಹತ್ತಿರ ಸ್ವಾಮೀಜಿಯವರ ವಸ್ತ್ರದ ಕುರಿತು ಗೇಲಿ ಮಾಡುತ್ತ "ಈ ಮಹಾಶಯನ ವಿಚಿತ್ರವಾದ ಪೋಷಾಕನ್ನು ನೋಡು" ಎಂದಳು. ಅವಳ ವ್ಯಂಗ್ಯವನ್ನು ಗಮನಿಸಿದ ಸ್ವಾಮೀಜಿ, ಹಿಂತಿರುಗಿ ಆ ಮಹಿಳೆಗೆ ಹೀಗೆಂದರು "ಮೇಡಂ, ನಿಮ್ಮ ದೇಶದಲ್ಲಿ ಉಡುಗೆ ತೊಡುಗೆಯಿಂದಲೇ ಸಜ್ಜನತೆ, ನಾಗರಿಕತೆಗಳನ್ನು ಅಳೆಯಲಾಗುತ್ತದೆ. ಇಲ್ಲಿ ಶಿಷ್ಟಾಚಾರ ಸೌಜನ್ಯತೆಗಳನ್ನು ಉತ್ಪಾದಿಸುವವನು ದರ್ಜಿಯೆಂದು ಕಾಣುತ್ತದೆ! ಆದರೆ ನನ್ನ ದೇಶದಲ್ಲಿ ಓರ್ವನ ಶೀಲ ಚಾರಿತ್ರ್ಯ ವ್ಯವಹಾರಗಳಿಂದ ಆತನನ್ನು ಗುರುತಿಸಲಾಗುತ್ತದೆಯೇ ಹೊರತು ಆತನ ಉಡುಗೆ ತೊಡುಗೆಗಳಿಂದ ಅಲ್ಲ" ಇದನ್ನು ಕೇಳಿದ ಆ ಮಹಿಳೆಯು ನಾಚಿಕೆಯಿಂದ ತಲೆತಗ್ಗಿಸಿದಳು. ಸ್ವಾಮಿ ವಿವೇಕಾನಂದರ ಉಡುಗೆ ತೊಡುಗೆಗಳಂಥಹ ಸಾಮಾನ್ಯ ವಿಷಯದಲ್ಲೂ ಭಾರತದ ಪದ್ಧತಿಯ ಕುರಿತು ಅಪಾರ ಗೌರವವಿತ್ತು, ಜೊತೆಗೆ ಭಾರತವನ್ನು ಹೀಗಳೆಯುವವರಿಗೆ ಖಡಕ್ಕಾಗಿ ಉತ್ತರ ನೀಡುವ ಛಾತಿಯೂ ಇತ್ತು.

# ಭಟ್ಟರ ತೋಪಿನಲ್ಲಿ ಕಾಡುಮಾವಿನ ವೈವಿಧ್ಯ

ನೆಲದ ಮಾತು

ಹಣ್ಣುಗಳಲ್ಲಿ ಮಾವಿಗೆ ರಾಜನ ಸ್ಥಾನ. ಅದರಲ್ಲೂ ಕಾಡುಮಾವಿನ ರುಚಿಯ ಮುಂದೆ ನಾಡ ಹಣ್ಣುಗಳ ಖದರು ಏನೇನೂ ಇಲ್ಲ. ಇಂತಹ 80ಕ್ಕೂ ಅಧಿಕ ಬಗೆಯ ಉತ್ಕೃಷ್ಟ ಕಾಡುಮಾವಿನ ತಳಿಗಳ ಸಂರಕ್ಷಣೆಯಲ್ಲಿ ತೊಡಗಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆ ಮರ್ಕಂಜ ಗ್ರಾಮದ ಮಾಪಲತೋಟ ಸುಬ್ರಾಯ ಭಟ್ಟರು.

ಭಟ್ಟರು ಐದು ಎಕರೆಯಲ್ಲಿ ನೂರಾರು ಬಗೆಯ ಹೈಬ್ರಿಡ್ ಮಾವು ಬೆಳೆಯುತ್ತಾರೆ. ತೋಪಿನಲ್ಲಿ ಬೆಳೆದಿರುವ ಒಂದೊಂದು ತಳಿಯ ಕಾಡುಮಾವಿನ ಹಣ್ಣಿಗೂ ಒಂದೊಂದು ರುಚಿ. ಎರಡು ಎಕರೆ ಜಾಗವನ್ನು ವಿಶೇಷವಾಗಿ ಕಾಡುಮಾವಿನ ತಳಿಗಳಿಗೆಂದೇ ಮೀಸಲಿಟ್ಟಿದ್ದಾರೆ. ಒಂದೊಂದು ತಳಿಯ ಎರಡೆರಡು ಗಿಡಗಳನ್ನು ಅವರು ನೆಟ್ಟು ಬೆಳೆಸಿದ್ದಾರೆ.



'ನಮ್ಮದು ಕೃಷಿ ಪರಂಪರೆಯ ವಂಶ. ನನ್ನ ತಂದೆ ಕಾಡುಮಾವಿನ 30ಕ್ಕೂ ಅಧಿಕ ಉತ್ಕೃಷ್ಟ ತಳಿಗಳ ಗಿಡಗಳನ್ನು ಬೆಳೆಸಿದ್ದರು. ಆ ಗಿಡಗಳೆಲ್ಲ ಕಸಿ ಕಟ್ಟಿ ಬೆಳೆಸಿದ್ದಲ್ಲ; ಬದಲಾಗಿ ಗೊರಟೆಯಿಂದ ಬೆಳೆಸಿದ ಸಸಿ ನೆಟ್ಟು ಪೋಷಿಸಿದವು. ನನ್ನ ತಂದೆ ಬೆಳೆಸಿದ ಗಿಡಗಳಲ್ಲಿ ಕೆಲವು ಈಗಿಲ್ಲ. ಆಗ ನಾನಿನ್ನೂ ಚಿಕ್ಕವನಿದ್ದ ಕಾರಣ ಅವುಗಳನ್ನು ಉಳಿಸಿಕೊಳ್ಳಬೇಕು ಎನ್ನುವ ಅರಿವು ಇರಲಿಲ್ಲ. ಈಗ ನೆನೆದರೆ ತುಂಬ ಬೇಸರವಾಗುತ್ತದೆ' ಎನ್ನುವ ಸುಬ್ರಾಯ ಭಟ್ಟರಿಗೆ ಕಾಡುಮಾವು ತಳಿಯ ಸಂರಕ್ಷಣೆ ಎಂಬುದು ಒಂದು ಹವ್ಯಾಸವಂತೆ. ಭಟ್ಟರು ಸಂಗ್ರಹಿಸಿ ತಂದ ತಳಿಗಳನ್ನೆಲ್ಲ ಕೂಡಿಸಿ ಲೆಕ್ಕ ಹಾಕಿದರೆ ಈಗ ಅವರ ಬಳಿ ಹತ್ತಿರತ್ತಿರ ನೂರು ಕಾಡುಮಾವಿನ ತಳಿಯ ಗಿಡಗಳಿವೆ. ತಂದೆ ಗೊರಟೆಯಿಂದ ಗಿಡ ಬೆಳೆಸಿದರೆ; ಇವರು ಸಂಗ್ರಹಿಸಿರುವ ತಳಿಗಳೆಲ್ಲವೂ ಕಸಿಮಾಡಿ ಬೆಳೆಸಿರುವ ಗಿಡಗಳು. ಕಾಡುಮಾವಿಗೆ ನಿರ್ದಿಷ್ಟ ಸ್ಥಾನಮಾನವಿಲ್ಲ, ಹೆಸರೂ ಇಲ್ಲ ಎನ್ನುವ ಭಟ್ಟರು, 'ಕಾಡುಮಾವು ಅಂದರೆ ಕಾಡುಮಾವು ಅಷ್ಟೇ. ಗುರುತಿಗೆ ಇರಲಿ ಎಂದು ನಾವೇ ಒಂದು ಹೆಸರಿಡುತ್ತೇವೆ. ಪ್ರತಿಯೊಂದು ಕಾಡುಮಾವಿನದ್ದೂ ಒಂದೊಂದು ಸೊಗಸು. ಒಂದರ ರುಚಿ ಮತ್ತೊಂದಕ್ಕಿಂತ ಭಿನ್ನ. ತಿಂದಾಗಲೇ ನಮಗೆ ರುಚಿಯಲ್ಲಿನ ವ್ಯತ್ಯಾಸ ಅರಿವಿಗೆ ಬರುತ್ತದೆ' ಎನ್ನುತ್ತಾರೆ.

ಭಟ್ಟರ ತೋಟದಲ್ಲಿ ಉತ್ತರ ಕನ್ನಡ, ಅರಸೀಕೆರೆ, ಕೊಡಗು, ಚಿಕ್ಕಮಗಳೂರು, ಉಡುಪಿ, ಮಂಗಳೂರು, ಕುಂದಾಪುರ, ಕೊಡಗು ಹೀಗೆ ರಾಜ್ಯದ ವಿವಿಧ ಭಾಗದಿಂದ ತಂದು ಕಸಿಮಾಡಿ ಬೆಳೆಸಿದ ಕಾಡು ಮಾವಿನ ತಳಿಯ ಗಿಡಗಳಿವೆ. ಕಾಡುಮಾವು ಬೆಳೆಸುವುದಕ್ಕೂ, ನಾಡ ತಳಿಯ ಮಾವುಗಳನ್ನು ಪೋಷಿಸುವುದಕ್ಕೂ ವ್ಯತ್ಯಾಸ ಇದೆಯೇ ಎಂಬ ಪ್ರಶ್ನೆಗೆ, 'ರಾತ್ರಿ ಹಗಲಿನ ವ್ಯತ್ಯಾಸ' ಎಂಬ ಒಗಟಿನ ರೂಪದಲ್ಲಿ ಉತ್ತರಿಸುತ್ತಾರೆ. ಭಟ್ಟರು ಕಸಿ ಮಾಡಿ ಜಮೀನಿನಲ್ಲಿ ನೆಟ್ಟ ಕಾಡು ತಳಿಯ ಗಿಡಗಳನ್ನು ಬೆಳೆಸಲು ಅವುಗಳಿಗೆ ವಿಶೇಷ ಆರೈಕೆಯನ್ನೇನೂ ಮಾಡುವುದಿಲ್ಲವಂತೆ. ಆರಂಭದ ಎರಡು ವರ್ಷ ಚೆನ್ನಾಗಿ ನಿಗಾ ಮಾಡಿದರೆ, ಮುಂದೆ ಗಿಡಗಳು ಪೊಗದಸ್ತಾಗಿ ಬೆಳೆದು ಚೆನ್ನಾಗಿ ಫಸಲು ನೀಡುತ್ತವೆ ಎನ್ನುತ್ತಾರೆ.

ನೆಟ್ಟ ಆರೇಳು ವರ್ಷದಲ್ಲಿ ಗಿಡ ಫಸಲು ಕೊಡಲು ಆರಂಭಿಸುತ್ತದೆ. ಗೊರಟೆಯಿಂದ ಬೆಳೆಸಿದ ಮರವಾದರೆ 50ರಿಂದ 80 ವರ್ಷ ಬದುಕುತ್ತದೆ. ಕಸಿ ಮಾಡಿದ್ದಾದರೆ 35 ವರ್ಷದ ತನಕ ಬಾಳುತ್ತದೆ. ಗೊರಟೆಯಿಂದ ಬೆಳೆಸಿದ ಗಿಡ ನೀಡುವ ಹಣ್ಣಿಗೂ, ಕಸಿ ಮಾಡಿ ಬೆಳೆಸಿದ ಗಿಡ ನೀಡುವ ಹಣ್ಣಿನ ಗುಣ ರುಚಿಯಲ್ಲಿ ತುಂಬ ವ್ಯತ್ಯಾಸ ಇರುತ್ತದೆ. ಕಸಿ ಗಿಡಗಳಲ್ಲಿ ಮೂಲದ ರುಚಿ ಕೆಲವೊಮ್ಮೆ ಕಂಡುಬರದೆಯೂ ಹೋಗಬಹುದು. ಕಾಡು ಮಾವು ಇಂತಹ ಸೀಮೆಗೆ ಮಾತ್ರ ಮೀಸಲು ಎಂಬುದಿಲ್ಲ, ಎಲ್ಲಿ ಬೇಕಾದರೂ ಅದನ್ನು ಬೆಳೆಯಬಹುದು ಎಂದೆನ್ನುವ ಭಟ್ಟರು, ರುಚಿ ಮಾತ್ರದಿಂದಲೇ ಯಾವ ಕಾಡುಮಾವು ಎಂಬುದನ್ನು ಗುರುತಿಸಬಲ್ಲರು.

'ಕಾಡು ತಳಿಯ ಮಾವಿನ ಹಣ್ಣುಗಳನ್ನು ಮಾರಾಟ ಮಾಡಿ ದುಡ್ಡು ಸಂಪಾದನೆ ಮಾಡಬೇಕು ಎಂಬ ಆಸೆಯಿಲ್ಲ. ತೋಪಿನಲ್ಲಿರುವ ಕಾಡು ಮಾವಿನ ಗಿಡಗಳು ಸೀಸನ್‌ಗಳಲ್ಲಿ ಸಾಕಷ್ಟು ಹಣ್ಣು ಬಿಡುತ್ತದೆ. ಮನಸ್ಸಿಗೆ ತೃಪ್ತಿಯಾಗುವಷ್ಟು ತಿನ್ನುತ್ತೇವೆ. ಬೇರೆಯವರಿಗೂ ಹಂಚುತ್ತೇವೆ. ಉಳಿದ ಹಣ್ಣುಗಳು ನೆಲಕ್ಕೆ ಬಿದ್ದು ಅಲ್ಲೇ ಕೊಳೆಯುತ್ತವೆ. ಕಾಡು ತಳಿ ಬೆಳೆಸುವ ಆಸೆ ಇದ್ದವರಿಗೆ ಕಸಿ ಗಿಡಗಳನ್ನು ಉಚಿತವಾಗಿ ಕೊಡುತ್ತೇನೆ' ಎನ್ನುತ್ತಾರೆ ಭಟ್ಟರು.

ಕೃಪೆ: ಪ್ರಜಾವಾಣಿ

## ರಾಸ್ ಬಿಹಾರ್ ಬೋಸ್

(ಮೇ 25, 1886 – ಜನವರಿ 21, 1945)



ರಾಸ್ ಬಿಹಾರ್ ಬೋಸ್ ಭಾರತದ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಮುಖರು. ಬೋಸರು ಮೇ 25, 1886 ರಂದು ಪಶ್ಚಿಮ ಬಂಗಾಳದ ಬರ್ಧ್ವಾನಿನ ಸುಬಲ್ದಹಾ ಹಳ್ಳಿಯಲ್ಲಿ ಜನಿಸಿದರು. ಭಾರತದ ಸ್ವಾತಂತ್ರ್ಯದ ತುಡಿತದಿಂದಾಗಿ ಸಣ್ಣವಯಸ್ಸಿನಲ್ಲೇ ರೆವಲ್ಯೂಷನರಿ ಪಾರ್ಟಿಯ ಸದಸ್ಯರಾದರು.

ದೆಹಲಿ, ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ರಾಸ್ ಬಿಹಾರಿ ಬೋಸರು ಹಲವಾರು ಕ್ರಾಂತಿಕಾರಿಗಳೊಡನೆ ಬ್ರಿಟಿಷರ ವಿರುದ್ಧದ ಭೂಗತ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಭಾರತದ ವೈಸರಾಯ್ ಆಗಿದ್ದ ಲಾರ್ಡ್ ಹಾರ್ಡಿಂಜನ ಮೆರವಣಿಗೆಯ ಸಂದರ್ಭದಲ್ಲಿ ದೆಹಲಿಯ ಚಾಂದಿನಿ ಚೌಕದಲ್ಲಿ ಡಿಸೆಂಬರ್ 23, 1912ರಂದು ಬಾಂಬ್ ಎಸೆದಾಗ ರಾಸ್ ಬಿಹಾರಿ ಬೋಸರ ಹೆಸರು ಪ್ರಖ್ಯಾತಿ ಪಡೆಯಿತು.

ಈ ಬಾಂಬ್ ಎಸೆದ ನಂತರದಲ್ಲಿ ಬೋಸರು ಚಾಣಾಕ್ಷತನದಿಂದ ಪೋಲೀಸರ ಕಣ್ಣು ತಪ್ಪಿಸಿಕೊಂಡು ವಾರಾಣಾಸಿಯಲ್ಲಿ ಅವಿತು, ಗದರ್ ಪಕ್ಷದ ಕಾರ್ಯಕರ್ತರೊಡನೆ ಏಕಕಾಲದಲ್ಲಿ ಉತ್ತರ ಭಾರತದಲ್ಲೆಲ್ಲಾ ಧ್ವನಿಸುವಂತೆ ವಿವಿಧ ಕ್ರಾಂತಿಕಾರಿ ಹೋರಾಟಗಳಿಗೆ ಸೂತ್ರಧಾರಿಯಾದರು.

ರಾಸ್ ಬಿಹಾರಿ ಬೋಸರ ಈ ಎಲ್ಲಾ ಯತ್ನಗಳನ್ನೂ ಬ್ರಿಟಿಷರು ಸದೆಬಡಿದು ಗದರ್ ಪಕ್ಷದ ಕ್ರಾಂತಿಕಾರರಲ್ಲಿ ಬಹಳಷ್ಟು ಜನರನ್ನು ಶಿಕ್ಷೆಗೆ ಒಳಪಡಿಸಿದರಾದರೂ ರಾಸ್ ಬಿಹಾರಿ ಬೋಸರನ್ನು ಮಾತ್ರ ಹಿಡಿಯಲಾಗಲಿಲ್ಲ. ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸಿ ಜಪಾನಿಗೆ ತೆರಳಿದ್ದ ರಾಸ್ ಬಿಹಾರಿ ಬೋಸರ ಬಗ್ಗೆ ಆತಂಕಗೊಂಡ ಬ್ರಿಟಿಷರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವರ ಬಂಧನಕ್ಕೆ ಯತ್ನಿಸಿಯೂ ವಿಫಲರಾದರು. ಇತ್ತ ಜಪಾನಿನಲ್ಲಿ ಭೂಗತನಾಗಿದ್ದುಕೊಂಡಿದ್ದ ಬೋಸರು ಬ್ರಿಟನ್ ವಿರೋಧಿ ದೇಶಗಳ ಸಖ್ಯ ಬೆಳೆಸಿಕೊಳ್ಳತೊಡಗಿದರು.

ಮಾರ್ಚ್ 1942 ರಲ್ಲಿ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ ಸ್ಥಾಪನೆಗಾಗಿ ಬೋಸರು ಒಂದು ಸಮಾವೇಶವನ್ನು ನಡೆಸಿದರು. ಈ ಸಂಸ್ಥೆಯ ಮೊದಲ ಅಧಿವೇಶನ ಜೂನ್ 1942 ರಲ್ಲಿ ಬ್ಯಾಂಕಾಕಿನಲ್ಲಿ ಜರುಗಿತು. ಈ ಸಮಾವೇಶದಲ್ಲಿ ಅವರಿಗೆ ಇಂಡಿಯನ್ ನ್ಯಾಷನಲ್ ಆರ್ಮಿ ಸ್ಥಾಪನೆಗಾಗಿನ ಅಧಿಕಾರವನ್ನು ನೀಡಲಾಯಿತು. ಈ ನಿಟ್ಟಿನಲ್ಲಿ ಅವರು ಜಪಾನಿನಲ್ಲಿದ್ದ ಯುದ್ಧ ಖೈದಿಗಳನ್ನು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಲು ಸೈನಿಕರನ್ನಾಗಿ ಸಂಘಟಿಸಿದರು. 1943 ರಲ್ಲಿ ಸಿಂಗಪುರದಲ್ಲಿ ಇಂಡಿಯನ್ ನ್ಯಾಷನಲ್ ಆರ್ಮಿಯ ನಾಯಕತ್ವವನ್ನು ರಾಸ್ ಬಿಹಾರಿ ಬೋಸರು ಸುಭಾಷ್ ಚಂದ್ರ ಬೋಸರಿಗೆ ವರ್ಗಾಯಿಸಿದರು.

ರಾಸ್ ಬಿಹಾರಿ ಬೋಸರ ಕ್ರಾಂತಿಕಾರಿ ಸಂಘಟನೆಯಲ್ಲಿ ಸುಭಾಷ್ ಚಂದ್ರ ಬೋಸರಲ್ಲದೆ ಅರವಿಂದ್ ಘೋಷ್, ಖುದಿರಾಮ್ ಬೋಸ್ ಬಾಘಾ ಜತಿನ್ ಮುಂತಾದ ಪ್ರಮುಖರಿದ್ದರು. ಲೇಖಕ, ಪತ್ರಕರ್ತರೂ ಆಗಿದ್ದ ರಾಸ್ ಬಿಹಾರಿ ಬೋಸರಿಗೆ ಜಪಾನ್ ಸರ್ಕಾರ 'ಆರ್ಡರ್ ಆಫ್ ದಿ ರೈಸಿಂಗ್ ಸನ್' ಎಂಬ ಗೌರವ ನೀಡಿತ್ತು.

ದೇಶಕ್ಕಾಗಿ ತನ್ನ ಇಡೀ ಜೀವನವನ್ನು ಮುಡಿಪಾಗಿಟ್ಟು ಸ್ವಾರ್ಥರಹಿತ, ಕಷ್ಟಕರವಾದ ಕ್ರಾಂತಿಕಾರಕ ಮಾರ್ಗದಲ್ಲಿ ಬದುಕಿದ ರಾಸ್ ಬಿಹಾರಿ ಬೋಸರು ಜನವರಿ 21, 1945 ರಂದು ಟೋಕಿಯೋದಲ್ಲಿ ನಿಧನರಾದರು.

ಸಂಪಾದಕೀಯ ಸಹಕಾರ ಸತ್ಯನಾರಾಯಣ ಶಾನಭಾಗ್, ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

ಕೇಂದ್ರ ಸರಕಾರದ ಇಂಧನ ಖಾತೆ ಸಚಿವರಾದ ಪಿಯೂಷ್ ಗೋಯಲ್ ಅವರು ಉಜಾಲಾ ಯೋಜನೆಯಡಿ ಎಲ್‌ಇಡಿ ಬಲ್ಬ್ ಕ್ರಾಂತಿ ಯಶಸ್ವಿಯಾದಂತೆ ದೇಶದಲ್ಲಿ ವಿದ್ಯುತ್ ಚಾಲಿತ ಕಾರುಗಳು 2030ರೊಳಗೆ ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗಿಳಿಯುವ ನಿಟ್ಟಿನಲ್ಲಿ ಕೆಲಸ ನಡೆಯಬೇಕಿದೆ ಎಂದು ತಿಳಿಸಿದ್ದಾರೆ. ಪೆಟ್ರೋಲ್, ಡೀಸೆಲ್ ಬೇಡಿಕೆ ದೇಶದಲ್ಲಿ ಹೆಚ್ಚುತ್ತಿದ್ದು, ಅದರಿಂದ ಮಾಲಿನ್ಯವೂ ಏರುತ್ತಿದೆ. ಸರಕಾರದ ಸಹಾಯದಿಂದ ಆರಂಭಗೊಳ್ಳುವ ಈ ಯೋಜನೆಯಲ್ಲಿ ವಿದ್ಯುತ್ ಚಾಲಿತ ಕಾರುಗಳಿಂದ ಮಾಲಿನ್ಯ ಇಳಿಮುಖವಾಗುತ್ತದಲ್ಲದೇ ಹೊರದೇಶದಿಂದ ಆಮದು ಮಾಡಿಕೊಳ್ಳುವ ಕಚ್ಚಾತೈಲದಿಂದ ಆಗುವ ಆರ್ಥಿಕ ನಷ್ಟವೂ ಕಡಿಮೆಯಾಗಲಿದೆ. ಅಲ್ಲದೇ, ಕಟ್ಟರ್ ಇಸ್ಲಾಮನ್ನು ಪೋಷಿಸುತ್ತಿರುವ ಅರಬ್ ರಾಷ್ಟ್ರಗಳ ಆದಾಯವೂ ಕಡಿಮೆಯಾಗಲಿದೆ. ಜಗತ್ತಿನ ಇತರ ರಾಷ್ಟ್ರಗಳೂ ಇದೇ ಮಾದರಿ ಅನುಸರಿಸಿದರೆ, ಭಯೋತ್ಪಾದನೆಯೂ ಸ್ವಲ್ಪಮಟ್ಟಿಗೆ ತಹಬಂದಿಗೆ ಬರುವ ಸಾಧ್ಯತೆಯೂ ಇದೆ.

**1990 ರಲ್ಲಿ ಕಾಶ್ಮೀರ ಕಣಿವೆಯಿಂದ ಮುಸ್ಲಿಮ್ ಮೂಲಭೂತವಾದಿ, ಪ್ರತ್ಯೇಕತಾವಾದಿಗಳ ಅಟಾಟೋಪ ತಾಳಲಾರದೇ ಜೀವಭಯದಿಂದ ತಮ್ಮ ಮನೆಗಳನ್ನು ತೊರೆದು ದೇಶದ ವಿವಿಧ ಕಡೆಗಳಲ್ಲಿ ಆಶ್ರಯ ಪಡೆದರು ಕಾಶ್ಮೀರಿ ಪಂಡಿತರು. ಇದೀಗ ಜಮ್ಮು ಕಾಶ್ಮೀರದ ಸರಕಾರ ಕಾಶ್ಮೀರಿ ಪಂಡಿತರಿಗೆ ಕಣಿವೆಯಲ್ಲಿ ವಸತಿ ಬಡಾವಣೆ ನಿರ್ಮಿಸಲು ಸ್ಥಳವನ್ನು ಗುರುತಿಸಿದೆ. ಸುಮಾರು 400 ಪಂಡಿತ ಕುಟುಂಬಗಳಿಗೆ ಈಗಾಗಲೇ ಬಡಾವಣೆ ನಿರ್ಮಿಸಲು ಆದೇಶಪತ್ರವನ್ನು ಸಂಬಂಧಪಟ್ಟವರಿಗೆ ನೀಡಿದೆ. ಕೇಂದ್ರ ಸರಕಾರ ಬಿಡುಗಡೆಗೊಳಿಸಿದ ಪ್ಯಾಕೇಜನ್ನು ಬಳಸಿ ಬಡಾವಣೆಗಳನ್ನು ನಿರ್ಮಿಸುವ ಇರಾದೆ ರಾಜ್ಯ ಸರಕಾರದ್ದು. ಮುಂದಿನ ದಿನಗಳಲ್ಲಿ ಸರಕಾರಿ ಉದ್ಯೋಗಗಳಲ್ಲಿ ಅರ್ಹ ಕಾಶ್ಮೀರಿ ಪಂಡಿತರನ್ನು ನಿಯುಕ್ತಿಗೊಳಿಸುವ ಬಗ್ಗೆಯೂ ಅಲ್ಲಿನ ಸರ್ಕಾರ ಚಿಂತನೆ ನಡೆಸಿದೆ.**



ಬೆಂಗಳೂರು ನಗರ ಒಂದರಲ್ಲೇ ಪ್ರತಿದಿನ ಸುಮಾರು 4,000 ಟನ್ನಿಗೂ ಹೆಚ್ಚು ಹಸಿ ತ್ಯಾಜ್ಯ ಸಂಗ್ರಹವಾಗುತ್ತಿದೆ. ಈ ಹಸಿ ಕಸವನ್ನು ಗೊಬ್ಬರವನ್ನಾಗಿಸುವ ಮನೆಗಳು, ನಾಗರಿಕರು ಬಹಳ ವಿರಳ. ಹಸಿ ಕಸವನ್ನು ಸುಲಭವಾಗಿ ಗೊಬ್ಬರವನ್ನಾಗಿಸುವ ಯಂತ್ರವನ್ನು ನಗರದ ಐಐಎಸ್ಸಿಯ ನಿವೃತ್ತ ಸಂಶೋಧಕರು ತಯಾರು ಮಾಡಿದ್ದಾರೆ. ಪ್ರಮೋದ್ ಸಿದ್ದಗಂಗಯ್ಯ ಎಂಬ ಸಂಶೋಧಕರು ರಚಿಸಿರುವ 'ಸ್ವಚ್ಛ ಗುರು' ಎಂಬ ಈ ಯಂತ್ರ 2 ಕೆಜಿ ಹಸಿ ತ್ಯಾಜ್ಯವನ್ನು ಶೀಘ್ರಗತಿಯಲ್ಲಿ ಗೊಬ್ಬರವನ್ನಾಗಿಸುತ್ತದೆ. ಅಂದಾಜಿನ ಪ್ರಕಾರ ಪ್ರತಿ ಮನೆಯೂ ಸುಮಾರು 1 ಕೆಜಿ ಹಸಿ ಕಸವನ್ನು ದಿನದಲ್ಲಿ ಹೊರಹಾಕುತ್ತದೆ. 'ಸ್ವಚ್ಛ ಗುರು' ಯಂತ್ರವನ್ನು ಮನೆಯಲ್ಲೇ ಇರಿಸಿಕೊಳ್ಳಬಹುದಾಗಿದೆ. (ಬೆಲೆ ಅಮೆಜಾನ್ ವೆಬ್‌ಸೈಟಿನಲ್ಲಿ 4,650 ರೂಪಾಯಿಗಳು) ಅಥವಾ ಕೆಲ ಮನೆಗಳು ಒಟ್ಟಾಗಿ ಹಸಿತ್ಯಾಜ್ಯದ ಸೂಕ್ತ ವಿಲೇವಾರಿ ಮಾಡಿಕೊಳ್ಳಬಹುದಾಗಿದೆ.



**ಬೆಂಗಳೂರು ನಗರದ ಸಾಧನಾ ರಾಧಾಕೃಷ್ಣನ್ ಎಂಬುವವರು ಪ್ಲಾಸ್ಟಿಕ್ ಬಾಟಲಿಗಳು, ತೆಂಗಿನ ಚಿಪ್ಪುಗಳನ್ನು ಬಳಸಿ ತಮ್ಮ ಮನೆಯಲ್ಲಿ ಚಿಕ್ಕ ಮಟ್ಟದ ತೋಟಗಾರಿಕೆಯನ್ನು ನಡೆಸುತ್ತಿದ್ದಾರೆ. ಬಾಟಲಿಗಳಿಗೆ ಮಣ್ಣು, ಸಾವಯವ ಗೊಬ್ಬರವನ್ನು ತುಂಬಿ ಮನಸ್ಸಿಗೆ ಹಿತಕರವೆನಿಸುವ ಹೂವಿನ ಗಿಡಗಳು, ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಇತ್ತೀಚಿನ ಹೊಸ ಪ್ರಯೋಗವಾದ ವರ್ಟಿಕಲ್ ಗಾರ್ಡನಿಂಗ್ (ಮರದ ಸುತ್ತಲೂ ಅಥವಾ ಲಂಬವಾದ ಕಂಬದ ಸುತ್ತ ಗಿಡ ಬೆಳೆಯುವ ರೀತಿ) ಅನ್ನು ಅಭ್ಯಸಿಸಿ ಹಸುರಿನ ಸಿರಿಯನ್ನು ಬೆಳೆಸುವ ಇವರ ಮಾದರಿ ಅನುಕರಣೀಯ. ಅವರಿರುವ ಬಾಡಿಗೆ ಮನೆಯಲ್ಲಿ ಸುಮಾರು 250ಕ್ಕೂ ಹೆಚ್ಚು ಪ್ರಬೇಧದ ಗಿಡಗಳಿವೆ!**



ಟಿ ಎನ್ ಶಿವಕುಮಾರ್ ಬೆಂಗಳೂರಿನ ನಿವಾಸಿಗಳು. ಕಳೆದ ಹದಿಮೂರು ವರ್ಷಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಕ್ಯಾನ್ಸರ್ ಕಾಯಿಲೆ ಇದೆಯೆಂದು ಪತ್ತೆ ಮಾಡಿದ ವೈದ್ಯರು, ಇವರು ಮೂರೇ ತಿಂಗಳು ಬದುಕುತ್ತಾರೆಂದು ಹೇಳಿದ್ದರು. ಶಿವಕುಮಾರರು ತಾವು ಆಯುರ್ವೇದ ಔಷಧದಿಂದಲೇ ಕ್ರಮೇಣ ಗುಣಮುಖನಾದೆನೆಂದು ಹೆಮ್ಮೆಯಿಂದ ತಿಳಿಸುತ್ತಾರೆ. ಜೊತೆಗೆ ನಿತ್ಯ ಸೂರ್ಯನಮಸ್ಕಾರ ಇವರ ಹವ್ಯಾಸ. ತಾವು ಹೋಗುವ ಆಸ್ಪತ್ರೆಯಲ್ಲೆಲ್ಲ ಇತರೆ ಕ್ಯಾನ್ಸರ್ ರೋಗಿಗಳೊಡನೆ ಸಮಯ ಕಳೆದು ತಮ್ಮ ಜೀವನಾನುಭವವನ್ನು ಹಂಚಿಕೊಳ್ಳುತ್ತಾರೆ. ಇತ್ತೀಚೆಗೆ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ 64 ವರ್ಷದ ಶಿವಕುಮಾರರು ತಡೆಯಿಲ್ಲದೇ 302 ಸೂರ್ಯನಮಸ್ಕಾರ ಮಾಡಿ ಇತರರಿಗೂ ಸೂರ್ಯನಮಸ್ಕಾರದ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ. ಆಯುರ್ವೇದ ಚಿಕಿತ್ಸೆಯ ಬಗ್ಗೆ ಈಗಾಗಲೇ ಶಿವಕುಮಾರರು ಕಿರುಪುಸ್ತಕವನ್ನೂ ಬರೆದಿದ್ದಾರೆ.

# ಸಾಲುದ್ದದ ಸುದ್ದಿಗಳು



**ಅಭಿಯಂತರನಾಗಿ ವಾರ್ಷಿಕ 24 ಲಕ್ಷ ರೂಪಾಯಿಗಳ ಸಂಬಳ ಗಳಿಸುತ್ತಿದ್ದ ಸಚಿನ್ ಕಾಳೆ ಆ ವೃತ್ತಿಯನ್ನು ತೊರೆದು ವ್ಯವಸಾಯದ ಮೊರೆಹೋದರು. ಈಗ ಅವರು ದುಡಿಯುತ್ತಿರುವುದು ವರ್ಷಕ್ಕೆ 2 ಕೋಟಿ ರೂಪಾಯಿಯಷ್ಟು. ಛತ್ತೀಸಘಡ ರಾಜ್ಯದ ಬಿಲಾಸಪುರ ಜಿಲ್ಲೆಯ ಮೇಧಾಪುರದವರಾದ ಸಚಿನ್, ಗುರುಗ್ರಾಮದ ಪ್ರತಿಷ್ಠಿತ ಕಂಪನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ತಮ್ಮದೇ ಸಂಸ್ಥೆಯನ್ನು ಹುಟ್ಟುಹಾಕಿ, ಸುತ್ತಮುತ್ತಲಿನ ರೈತರಿಗೆ ಗುತ್ತಿಗೆ ವ್ಯವಸಾಯದ ಬಗ್ಗೆ ತಿಳಿಸಿಕೊಟ್ಟು, ತಾವೂ ವ್ಯವಸಾಯದ ಕಡೆ ಮುಖ ಮಾಡಿದ್ದಾರೆ. ತಮ್ಮ ಹೊಲಗಳಲ್ಲಿ ಅತ್ಯುನ್ನತ ಮಟ್ಟದ ತಂತ್ರಜ್ಞಾನದ ಬಳಕೆಯಿಂದಲೇ ವ್ಯವಸಾಯ ಮಾಡುವ, ರೈತರು ನಷ್ಟ ಅನುಭವಿಸದೇ ಲಾಭದೊಂದಿಗೆ ಗುತ್ತಿಗೆದಾರರು ಸೂಚಿಸುವ ಬೆಳೆಯನ್ನು ಬೆಳೆಯುವ ಕಾರ್ಯದಲ್ಲಿ ಕಾಳೆ ತೊಡಗಿದ್ದಾರೆ.**

ಇತ್ತೀಚೆಗೆ ಕೊಚ್ಚಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ 21 ರಾಜ್ಯಗಳ 10 ರಿಂದ 75 ವರ್ಷ ವಯೋಮಾನದ 6,582 ಮಹಿಳೆಯರು 16 ನಿಮಿಷಗಳ ಕಾಲ ಕೇರಳದ ಸಾಂಪ್ರದಾಯಿಕ ನೃತ್ಯ ತಿರುವಾತಿರಕ್ಕಳಿಯನ್ನು ಪ್ರದರ್ಶಿಸಿದರು. ಇದು ಗಿನ್ನಿಸ್ ವಿಶ್ವ ದಾಖಲೆ ಸೇರಿದೆ. ಕೇರಳದ ಸಾಂಪ್ರದಾಯಿಕ ತೊಡುಗೆಯಾದ ಹೊಂಬಣ್ಣದ ಅಂಚುಳ್ಳ ಮುಂಡು ಮತ್ತು ನೆರಿಯಟ್ಟು ತೊಟ್ಟು, ವೃತ್ತಾಕಾರದಲ್ಲಿ ಸಾಂಪ್ರದಾಯಿಕ ಗೀತೆಗೆ ಎಲ್ಲರೂ ಹೆಜ್ಜೆ ಹಾಕಿದ್ದು, ಕೇರಳೀಯರನ್ನು ಒಗ್ಗೂಡಿಸಲು, ಕೋಮು ಸೌಹಾರ್ದತೆ, ಮಹಿಳೆಯರ ಸಬಲೀಕರಣ ಮತ್ತು ಸಾಂಪ್ರದಾಯಿಕ ಕಲೆಗೆ ಪ್ರೋತ್ಸಾಹ ನೀಡಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

**ಹುತಾತ್ಮರಾದ ಯೋಧರ ಮಕ್ಕಳಿಗಾಗಿ 'ಪತಂಜಲಿ ಆವಾಸೀಯ ಸೈನಿಕ್ ಸ್ಕೂಲ್' ಸ್ಥಾಪಿಸುವುದಾಗಿ ಯೋಗ ಗುರು ಬಾಬಾ ರಾಮ್‌ದೇವ್ ಅವರು ಘೋಷಿಸಿದ್ದಾರೆ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಯೋಧರ ಮಕ್ಕಳು ಇಲ್ಲಿ ಉಚಿತವಾಗಿ ವಿದ್ಯಾಭ್ಯಾಸ ಮಾಡಬಹುದಾಗಿದೆ. ದೆಹಲಿ-ಎನ್‌ಸಿಆರ್ ಪ್ರದೇಶದಲ್ಲಿ ಸ್ಥಾಪನೆಯಾಗಲಿರುವ ಈ ಶಾಲೆ ಈ ವರ್ಷದಿಂದಲೇ ಕಾರ್ಯಾರಂಭ ಮಾಡಲಿದೆ.**

ಕೇಂದ್ರ ಸರ್ಕಾರವು 14 ಲಕ್ಷ ಸಶಸ್ತ್ರ ಪಡೆಯ ಯೋಧರಿಗೆ ವೇತನ ಏರಿಕೆಯನ್ನು ಮಾಡಿ ಅಧಿಸೂಚನೆಯನ್ನು ಹೊರಡಿಸಿದೆ. 7ನೇ ವೇತನ ಆಯೋಗವು ಜಾರಿಗೆ ಬಂದ 2016 ರ ಜನವರಿ 1 ರಿಂದಲೇ ಅನ್ವಯವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದ್ದು, ಮೋದಿ ಸರ್ಕಾರ ಸಶಸ್ತ್ರ ಪಡೆಗಳ ಮುಖ್ಯ ಬೇಡಿಕೆಯನ್ನು ಪರಿಗಣಿಸಿದಂತಾಗಿದೆ.

**ಭಾರತೀಯ ಮೂಲದ 7 ವರ್ಷದ ಪುಟಾಣಿ ಈಶ್ವರ್ ಇಂಗ್ಲೆಂಡಿನ ಯೋಗ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಸತತ ಎರಡನೇ ಬಾರಿಗೆ ಗೆದ್ದಿದ್ದಾನೆ. ಏಪ್ರಿಲ್ 22 ರಂದು ಲಂಡನ್‌ನಲ್ಲಿ ಯುನೈಟೆಡ್ ಕಿಂಗ್‌ಡಮ್ ನ್ಯಾಷನಲ್ ಯೋಗ ಚಾಂಪಿಯನ್‌ಶಿಪ್ ನಡೆದಿದ್ದು, ಯುಕೆ ಯೋಗ ಸ್ಪೋರ್ಟ್ಸ್ ಫೆಡರೇಶನ್ ಇದನ್ನು ಆಯೋಜನೆ ಮಾಡಿತ್ತು. ಈತನನ್ನು ಗ್ಲೋಬಲ್ ಯೋಗ ಮ್ಯಾಗಜೀನ್ ಯಂಗೆಸ್ಟ್ ವಂಡರ್ ಬಾಯ್ ಎಂದು ಕರೆದಿದೆ. ಈ ವರ್ಷದ ಜೂನ್‌ನಲ್ಲಿ ನೇಪಾಳದಲ್ಲಿ ನಡೆಯಲಿರುವ ವರ್ಲ್ಡ್ ಯೋಗ ಚಾಂಪಿಯನ್‌ಶಿಪ್‌ನಲ್ಲಿ ಈತ ಗ್ರೇಟ್ ಬ್ರಿಟನ್‌ನನ್ನು ಪ್ರತಿನಿಧಿಸಲಿದ್ದಾನೆ.**

## 2019ಕ್ಕೆ ಸಿದ್ಧಗೊಳ್ಳಲಿರುವ ಐಫೆಲ್ ಟವರ್‌ಗಿಂತಲೂ ಎತ್ತರದ ಜಮ್ಮು ಕಾಶ್ಮೀರದ ರೈಲ್ವೇ ಸೇತುವೆ

ಜಮ್ಮು ಕಾಶ್ಮೀರದ ಚಿನಬ್ ನದಿಯ ಮೇಲೆ ಚೀನಾದ ಐಫೆಲ್ ಟವರ್‌ಗಿಂತಲೂ ಎತ್ತರದ ರೈಲ್ವೇ ಸೇತುವೆಯನ್ನು ನಿರ್ಮಿಸುವ ಮೂಲಕ ಭಾರತ ತನ್ನ ಎಂಜಿನಿಯರಿಂಗ್ ಅದ್ಭುತವನ್ನು ಜಗತ್ತಿಗೆ ತೋರಿಸುತ್ತಿದೆ.ಪ್ರಸ್ತುತ ಈ ಸೇತುವೆ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಮುಂದಿನ ಎರಡು ವರ್ಷದಲ್ಲಿ ಇದರ ಕಾರ್ಯ ಪೂರ್ಣಗೊಳ್ಳಲಿದೆ. ಇದು ಐಫೆಲ್ ಟವರ್‌ಗಿಂತ 35 ಮೀಟರ್ ಎತ್ತರವಿರಲಿದೆ. ಒಮ್ಮೆ ಇದರ ನಿರ್ಮಾಣ ಪೂರ್ಣಗೊಂಡರೆ ಚೀನಾದ ಬೀಪನ್ ನದಿ ಮೇಲಿನ 275 ಮೀಟರ್ ಉದ್ದದ ಶುಯಿಬಯಿ ರೈಲ್ವೇ ಸೇತುವೆಯ ದಾಖಲೆಯನ್ನು ಇದು ಮುರಿಯಲಿದೆ.

ಚೆನಾಬ್ ನದಿ ಮೇಲೆ ಸೇತುವೆ ನಿರ್ಮಾಣಕ್ಕೆ 1,100 ಕೋಟಿಯನ್ನು ವ್ಯಯಿಸಲಾಗುತ್ತಿದೆ. 24 ಸಾವಿರ ಟನ್ ಸ್ಟೀಲನ್ನು ಇದಕ್ಕೆ ಬಳಸಿ ಕಟ್ಟಲಾಗುತ್ತಿರುವ ಈ ಸೇತುವೆ ನದಿಯ ತಳದಿಂದ 359 ಮೀಟರ್ ಎತ್ತರವಿರಲಿದೆ. ಈ 1.315 ಕಿ.ಮೀ ಉದ್ದದ ಎಂಜಿನಿಯರಿಂಗ್ ಅದ್ಭುತ ಬಕ್ಕಲ್ ಮತ್ತು ಶ್ರೀನಗರದ ಕೌರಿಯನ್ನು ಸಂಪರ್ಕಿಸಲಿದೆ.

**ಕೃಪೆ: ನ್ಯೂಸ್13.ಇನ್**

ನರ್ಮದಾ ನದಿಗೆ 'ಜೀವಂತ ನದಿ' ಸ್ಥಾನಮಾನ ನೀಡುವ ಸಲುವಾಗಿ ಮಧ್ಯಪ್ರದೇಶ ವಿಧಾನಸಭೆ ನಿರ್ಣಯವನ್ನು ಅಂಗೀಕರಿಸಿದ್ದು, ಇದರನ್ವಯ ನರ್ಮದೆಗೆ ಹಾನಿಯುಂಟುಮಾಡುವವರು ತಕ್ಕ ದಂಡವನ್ನು ತೆರಬೇಕಾಗುತ್ತದೆ. ನರ್ಮದಾ ನದಿ ಸಂರಕ್ಷಣೆಗೆ 'ನರ್ಮದಾ ಸೇವಾ ಯಾತ್ರಾ' ಜಾಗೃತಿ ಅಭಿಯಾನ ನಡೆಸುತ್ತಿರುವ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾನ್ 'ನರ್ಮದೆಯನ್ನು ಸಂರಕ್ಷಿಸಲು ನಮ್ಮ ಸರ್ಕಾರ ಪರಿಶ್ರಮಪಡುತ್ತಿದೆ. ನರ್ಮದೆ ನಮ್ಮ ತಾಯಿ, ಆಕೆಯ ಮಕ್ಕಳಾಗಿರುವ ನಾವು ಆಕೆಯನ್ನು ರಕ್ಷಿಸಬೇಕು, ಅದು ನಮ್ಮ ಕರ್ತವ್ಯ' ಎಂದು ಹೇಳಿದ್ದಾರೆ.

**ಪ್ರಧಾನಿ ನರೇಂದ್ರ ಮೋದಿಯವರ 'ಬೇಟಿ ಬಚಾವೋ ಬೇಟಿ ಪಢಾವೋ' ಅಭಿಯಾನದಿಂದ ಪ್ರೇರಿತಗೊಂಡ ಸೂರತ್ ಮೂಲಕ ಉದ್ಯಮಿಯೊಬ್ಬರು 10 ಸಾವಿರ ಹೆಣ್ಣುಮಕ್ಕಳಿಗೆ ಬರೋಬ್ಬರಿ 200 ಕೋಟಿ ರೂಪಾಯಿ ಬಾಂಡ್ ವಿತರಣೆ ಮಾಡಿದ್ದಾರೆ. ಈ ಯೋಜನೆಯ ಫಲವಾಗಿ ದೇಶದಾದ್ಯಂತ ಹೆಣ್ಣುಮಕ್ಕಳ ಶಿಕ್ಷಣ, ರಕ್ಷಣೆಗಾಗಿ ವಿವಿಧ ಅಭಿಯಾನಗಳು ನಡೆಯುತ್ತಿವೆ. ಇದೀಗ ಸೂರತ್ ಉದ್ಯಮ ಬಾಂಡ್ ನೀಡಿ ಆರ್ಥಿಕವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ನೆರವಾಗಿರುವುದು ಇನ್ನೂ ಅನೇಕರಿಗೆ ಪ್ರೇರಣೆ ನೀಡಲಿದೆ.**

ಸ್ಟ್ರಾಬೆರಿಗೆ ಪ್ರಸಿದ್ಧವಾಗಿರುವ ಮಹಾರಾಷ್ಟ್ರದ ಸತಾರ ಜಿಲ್ಲೆಯ ಭಿಲ್ಲರ್ ಇದೀಗ ದೇಶದ ಮೊದಲ 'ಬುಕ್ ವಿಲೇಜ್' ಆಗಿ ಗುರುತಿಸಿಕೊಂಡಿದೆ. ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರ ಯೋಜನೆಯಂತೆ ಈ ಗ್ರಾಮವನ್ನು 'ಬುಕ್ ವಿಲೇಜ್' ಆಗಿ ಅಭಿವೃದ್ಧಿಪಡಿಸಲಾಗಿದ್ದು, ಇಲ್ಲಿ 25 ಸ್ಥಳಗಳನ್ನು ಕಲಾತ್ಮಕವಾಗಿ ಸಿಂಗರಿಸಲಾಗಿದ್ದು, ಪುಸ್ತಕ, ಮ್ಯಾಗಜೀನ್, ಆತ್ಮಚರಿತ್ರೆ, ಜೀವನಚರಿತ್ರೆಗಳು ಇಲ್ಲಿ ಉಚಿತವಾಗಿ ಓದಲು ದೊರೆಯುತ್ತದೆ. ಪಕ್ಕದಲ್ಲೇ ಇರುವ ಗಿರಿಧಾಮಗಳಾದ ಪಂಚಗನಿ, ಮಹಾಬಲೇಶ್ವರಕ್ಕೆ ಆಗಮಿಸುವ ಪ್ರವಾಸಿಗರಿಗೆ ಇದೊಂದು ಆಕರ್ಷಣೆಯ ಕೇಂದ್ರವಾಗಲಿದೆ. ಇಲ್ಲಿ ಸಾಹಿತ್ಯ ಹಬ್ಬಗಳನ್ನೂ ನಡೆಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.



ಕಾಶ್ಮೀರದ ಪೂಂಛ್‌ನಲ್ಲಿ ಬಿಎಸ್‌ಎಫ್ ಯೋಧ ಪ್ರೇಮ್ ಸಾಗರ್ ಅವರನ್ನು ಪಾಕಿಸ್ತಾನಿ ಸೇನೆ ಕೊಂದು ಅವರ ದೇಹವನ್ನು ವಿರೂಪಗೊಳಿಸಿದೆ. ಹುತಾತ್ಮ ಪ್ರೇಮ ಸಾಗರರ ಮಗಳು ತನ್ನ ತಂದೆಯ ಬರ್ಬರ ಸಾವಿಗೆ ಪ್ರತಿಯಾಗಿ ವೈರಿ ಪಡೆಯ ಕನಿಷ್ಠ 50 ಜನರ ಬಲಿದಾನವಾಗಲಿ ಎಂದು ಅಪೇಕ್ಷಿಸಿದ್ದಾಳೆ. ತಮ್ಮ ತಂದೆಯ ಹತ್ಯೆ ದುಃಖ ತರಿಸುತ್ತದಾದರೂ, ಅವರು ದೇಶದ ಸಲುವಾಗಿ ಪ್ರಾಣ ತೆತ್ತಿದ್ದಾರೆಂಬ ಹೆಮ್ಮೆ ನಮ್ಮ ಕುಟುಂಬಕ್ಕಿದೆ ಎಂದು ಯೋಧನ ಅಂತಿಮ ಸಂಸ್ಕಾರದ ವೇಳೆ ಆ ಚಿಕ್ಕ ಬಾಲಕಿ ಹೇಳಿದ್ದಾಳೆ.

ಪಾಕಿಸ್ತಾನ ಸೇನೆ ಕೊಂದ ಇನ್ನೊಬ್ಬ ಸೈನಿಕ ಪರಮ್‌ಜಿತ್ ಸಿಂಗ್ ಅವರ ಮಗಳೂ ತನ್ನ ತಂದೆ ದೇಶಕ್ಕಾಗಿ ಪ್ರಾಣ ಕೊಟ್ಟಿದ್ದರ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿರುವುದು ಸೈನಿಕರ ಕುಟುಂಬಗಳ ದೇಶಪ್ರೇಮಕ್ಕೆ ಸಾಕ್ಷಿಯಾಗಿದೆ!

ಪುಂಗವ PUNGAVA
# 74, Ranga Rao Road, Shankarapuram, Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-5-2017



# ಕೇರಳದ ಬತ್ತಿ ಹೋಗಿದ್ದ ನದಿಯೊಂದಕ್ಕೆ ಪುನರುಜ್ಜೀವನ

ನೀರು ಮನುಷ್ಯನ ಜೀವನಕ್ಕೆ ಅತ್ಯಗತ್ಯ. ನೀರಿನ ಮೂಲಗಳಾದ ನದಿಗಳು, ಕೊಳ-ಕೆರೆಗಳು ಮನುಷ್ಯನ ಸ್ವಾರ್ಥದಿಂದ ಹಾಳಾಗುತ್ತಿವೆ. ನದಿ, ಕೊಳಗಳನ್ನು ಪುನಶ್ಚೇತನಗೊಳಿಸಿದಲ್ಲಿ ಮನುಷ್ಯನ ಕೃಷಿಯ ಅಗತ್ಯಗಳನ್ನು ಪೂರೈಸಬಹುದು ಎಂಬುದು ಪರಿಸರವಾದಿಗಳ ನಿಲುವು. ಆದರೆ ಆ ವಿಷಯವಾಗಿ ನಮ್ಮ ಪ್ರಯತ್ನ ಕಿಂಚಿತ್ತೂ ಮಾಡದಿದ್ದರೆ ಹೇಗೆ? ಕೇರಳದ ಅಲೆಪ್ಪಿ(ಅಲಪುಳಾ) ಜಿಲ್ಲೆಯ ಬುಧನೂರು ಪಂಚಾಯ್ತಿ ವ್ಯಾಪ್ತಿಗೆ ಬರುವ ನದಿಯೊಂದು ಸುತ್ತಲಿನ ಗ್ರಾಮಗಳಿಗೆ ಜೀವನದಿಯಾಗಿತ್ತು. ಪಂಪಾ, ಅಚ್ಚನಕೋವಿಲ್ ನದಿಗಳ ಉಪನದಿಯಾದ ಕುಟ್ಟೆಂಪೆರೂರು 12 ಕಿಮೀ ಉದ್ದವಿದ್ದು 100 ಮೀಟರ್ ಅಗಲದೊಂದಿಗೆ ಸುತ್ತಲಿನ ಗ್ರಾಮಗಳಿಗೆ, 25,000 ಎಕರೆಯ ಭತ್ತದ ಹೊಲಕ್ಕೆ ನೀರುಣಿಸುತ್ತಿತ್ತು. ನದಿಗಳಿದ್ದ ಕಡೆ ಉಸುಕಿನ ದಂಧೆ ಸಾಮಾನ್ಯ. ಹಾಗೆಯೇ ಇಲ್ಲಿಯೂ ಉಸುಕಿನ ದಂಧೆಯಿಂದಾಗಿ ನದಿ ನೀರಿನ ಪಾತ್ರ ಕ್ಷೀಣಿಸುತ್ತಾ ಹೋಯಿತು. ನದಿಯ ಜಾಗವನ್ನು ಅತಿಕ್ರಮಣ ಮಾಡುವವರೂ ಆರಂಭವಾದರು. ತದನಂತರದ ದಿನಗಳಲ್ಲಿ ಕಸ, ಪ್ಲಾಸ್ಟಿಕ್ಗಳನ್ನು ಎಸೆದು ನದಿಯನ್ನು ಜನರು ಸಂಪೂರ್ಣವಾಗಿ ನಿರ್ಲಕ್ಷಿಸತೊಡಗಿದರು.



ಸ್ವಚ್ಛಗೊಂಡ ನದಿಯಲ್ಲಿ ದೋಣಿ ವಿಹಾರ ನಡೆಸುತ್ತಿರುವ ಕೇರಳದ ಸಚಿವ ಜಿ. ಸುಧಾಕರನ್ ಮತ್ತು ಗ್ರಾಮಸ್ಥರು

ಹಿಂದೆಲ್ಲಾ ಕುಟ್ಟೆಂಪೆರೂರು ನದಿಯಲ್ಲಿ ದೋಣಿ ಮೂಲಕ ಗ್ರಾಮಸ್ಥರು ಸಾಮಾನು ಸರಂಜಾಮುಗಳನ್ನು ಸಾಗಿಸುತ್ತಿದ್ದರು. ಕಸದ ತೊಟ್ಟಿಯಂತಾಗತೊಡಗಿದ, ಕಳೆ ಬೆಳೆಯತೊಡಗಿದ ಈ ನೀರಿನಲ್ಲಿ ಇನ್ನು ದೋಣಿ ವಿಹಾರ ಸಾಧ್ಯವೇ? ನೀರು ಹರಿವು ಸಾಧ್ಯವೇ? ನದಿಯು ಈ ಚಿಂತಾಜನಕ ಸ್ಥಿತಿಗೆ ತಲುಪಿ 5 ವರ್ಷಗಳು ಸಂದಿದ್ದವು. ಅಂತೂ ಇತ್ತೀಚೆಗೆ ಈ ನದಿಯನ್ನು ಸ್ವಚ್ಛಗೊಳಿಸಿ ಪುನಶ್ಚೇತನಗೊಳಿಸಲಾಗಿದೆ. ಸುಮಾರು ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ 700 ಜನರು, 45 ದಿವಸ ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ದುಡಿದು ಈ ನದಿಯಲ್ಲಿನ ಕಳೆ, ಕಸ, ಪ್ಲಾಸ್ಟಿಕ್, ಹೂಳನ್ನೂ ಸಹ ತೆಗೆದು ನಿಧಾನವಾಗಿ ಹೊಸ ನೀರು ಹರಿಯುವಂತೆ ಮಾಡಿದ್ದಾರೆ. ಕೆಲ ವರ್ಷಗಳಿಂದ ಆ ಊರಿನಲ್ಲಿ ಕುಡಿಯುವ ನೀರಿಗೆ ಅಭಾವ ಉಂಟಾಗಿತ್ತು, ಈ ನದಿಯನ್ನು ಸ್ವಚ್ಛಗೊಳಿಸಿದ್ದರಿಂದ ಮುಂದಿನ ದಿನಗಳಲ್ಲಿ ಆ ಸಮಸ್ಯೆ ದೂರವಾಗಲಿದೆ. ಅಲ್ಲದೇ ಈ ಪುನಶ್ಚೇತನಾ ಕಾರ್ಯದಿಂದ ಗ್ರಾಮದ ಅಂತರ್ಜಲ ಮಟ್ಟವೂ ಏರಿರುವುದು ಗ್ರಾಮಸ್ಥರಲ್ಲಿ ಸಂತಸ ತಂದಿದೆ.

# ಜನಸಾಮಾನ್ಯರಿಗೂ ವಿಮಾನಯಾನ: ಕೇಂದ್ರದ ಉಡಾನ್ ಯೋಜನೆ

ವಿಮಾನಯಾನ ಶ್ರೀಮಂತರಿಗೇ ಹೊರತು ಬಡವರಿಗಲ್ಲ ಎಂಬ ಮಾತು ಪ್ರಚಲಿತ. ಅದನ್ನು ಈಗಿನ ಕೇಂದ್ರ ಸರಕಾರ ಬದಲಿಸಹೊರಟಿದೆ. ಸಾಮಾನ್ಯ ಜನರಿಗೂ ಕಡಿಮೆ ದರದಲ್ಲಿ ವಿಮಾನ ಯಾನ ಸೌಲಭ್ಯ ಕಲ್ಪಿಸುವ ಕೇಂದ್ರ ಸರ್ಕಾರದ ಮಹತ್ವದ ಉಡಾನ್ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದಾರೆ. ಉಡೇ ದೇಶ್ ಕಾ ಆಮ್ ನಾಗರಿಕ್ – ಉಡಾನ್ (ದೇಶದ ಸಾಮಾನ್ಯ ನಾಗರಿಕನೂ ವಿಮಾನಯಾನ ಮಾಡಲಿ) ಎಂಬ ಧ್ಯೇಯದೊಂದಿಗೆ ಆರಂಭವಾಗಿರುವ ಯೋಜನೆಯಿಂದ ಎರಡನೆಯ ಹಂತದ ನಗರಗಳು, ಅಲ್ಲಿನ ವ್ಯಾಪಾರಿಗಳು, ಜನಸಾಮಾನ್ಯರು ಇದರ ಸಂಪೂರ್ಣ ಲಾಭ ಪಡೆಯಬಹುದಾಗಿದೆ.



ನವದೆಹಲಿ-ಶಿಮ್ಲಾ ನಡುವಿನ ಪ್ರಪ್ರಥಮ ಉಡಾನ್ ವಿಮಾನ ಹಾರಾಟಕ್ಕೆ ಮೋದಿ ಹಸಿರು ನಿಶಾನೆ ತೋರಿದರು. ಇದೇ ಸಂದರ್ಭದಲ್ಲಿ ಕಡಪಾ-ಹೈದರಾಬಾದ್ ಮತ್ತು ನಾಂದೇಡ್-ಹೈದರಾಬಾದ್ ಉಡಾನ್ ಉದ್ಘಾಟನಾ ಹಾರಾಟಕ್ಕೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಚಾಲನೆ ನೀಡಿದರು. ಪ್ರಾದೇಶಿಕವಾಗಿ ವಾಯು ಸಂಪರ್ಕ ಕಲ್ಪಿಸುವ ಉಡಾನ್ ಯೋಜನೆ ಅಡಿಯಲ್ಲಿ ಒಂದು ಸೀಟಿಗೆ, ಒಂದು ಗಂಟೆ ಪ್ರಯಾಣಕ್ಕೆ ರೂ.2,500 ದರ ನಿಗದಿಪಡಿಸಲಾಗಿದೆ. ಪ್ರಯಾಣದ ಅಂತರ ಹಾಗೂ ಮಾರ್ಗಕ್ಕೆ ತಕ್ಕಂತೆ ದರ ಬದಲಾವಣೆ ಆಗಲಿದೆ.

## ತಮಿಳುನಾಡಿನ ಸೇವಾಭಾರತಿಯಿಂದ ವಿನೂತನ ಹೊಸ ವರ್ಷಾಚರಣೆ

ಸೌರಮಾನ ಪಂಚಾಂಗವನ್ನು ಅನುಸರಿಸುವ ತಮಿಳುನಾಡಿನಲ್ಲಿ ಇತ್ತೀಚೆಗೆ ಹೊಸ ವರ್ಷದ ಸಂಭ್ರಮ. ಹಿಂದೆಂದೂ ನಡೆಯದ ಒಂದು ಕಾರ್ಯಕ್ರಮದಲ್ಲಿ ತಮಿಳುನಾಡಿನ ವಿವಿಧ ಮಠಗಳಿಂದ ಆಗಮಿಸಿದ ಪೀಠಾಧಿಪತಿಗಳು ಚೆನ್ನೈನ ರಸ್ತೆಗಳಲ್ಲಿ ನಡೆದು ಜನರ ಜೊತೆ ಬೆರೆತು ಹೊಸವರ್ಷಕ್ಕೆ ಶುಭಾಶಯಗಳನ್ನು ಕೋರಿದರು, ಆಶೀರ್ವಚನ ನೀಡಿದರು. ಜನರ ಸಮಸ್ಯೆಗಳನ್ನು ಆಲಿಸಲು, ಅವರ ಜೊತೆ ನೇರವಾಗಿ ಬೆರೆಯಲು ಇದೊಂದು ಉತ್ತಮ ಮಾರ್ಗ ಎಂಬುದು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂತರ ಅಭಿಪ್ರಾಯವಾಗಿತ್ತು. 'ಸೇವಾ ಭಾರತಿ'ಯ ವತಿಯಿಂದ ನಡೆದ ಈ ಕಾರ್ಯಕ್ರಮದಲ್ಲಿ ತಮಿಳುನಾಡಿನ 40 ಸ್ವಾಮೀಜಿಗಳು ಚೆನ್ನೈನ 90 ಸ್ಥಳಗಳಿಗೆ ಭೇಟಿಯಿತ್ತರು. ಭಕ್ತರು ಈ ನಡೆಯನ್ನು ಸಹರ್ಷದಿಂದ ಸ್ವಾಗತಿಸಿದ್ದಲ್ಲದೇ ತಮ್ಮ ಮನೆಗಳಿಗೆ ಆಗಮಿಸಿದ ಸ್ವಾಮೀಜಿಗಳಿಗೆ ಪಾದಪೂಜೆ, ಆರತಿಗಳನ್ನು ಮಾಡಿದರು. ಸಂಘದ ಹಿರಿಯ ಕಾರ್ಯಕರ್ತರು ಈ ಸಂದರ್ಭದಲ್ಲಿ ಸಂತರ ಜೊತೆ ಭಾಗಿಯಾದರು.

## ಯೋಗಿ ಆದೇಶದಿಂದ ಅಯೋಧ್ಯೆಯಲ್ಲಿ ಮತ್ತೆ ರಾಮಲೀಲಾ ಆರಂಭ

ಹಣಕಾಸಿನ ತೊಂದರೆ ಮತ್ತು ಸರ್ಕಾರಗಳ ನಿರ್ಲಕ್ಷ್ಯದಿಂದ ನಿಂತು ಹೋಗಿದ್ದ ಅಯೋಧ್ಯೆಯಲ್ಲಿನ ರಾಮಲೀಲಾ ಆಚರಣೆ ಇದೀಗ ಮತ್ತೆ ಆರಂಭಗೊಂಡಿದೆ.ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಆದೇಶದ ಮೇರೆಗೆ ಬುಧವಾರ ಅಯೋಧ್ಯಾ ಸಂಶೋಧನಾ ಕೇಂದ್ರದ ಆವರಣದಲ್ಲಿ ರಾಮಲೀಲಾವನ್ನು ನೆರವೇರಿಸಲಾಗಿತ್ತು.ಮೇ3 ರಿಂದ ಮೇ 12ರವರೆಗೆ ಮಹಂತ ಜಯರಾಮ್ ದಾಸ್ ಅವರ ಅವಧ್ ಆದರ್ಶ್ ರಾಮಲೀಲಾ ಮಂಡಳಿ ಹಾಗೂ ಮೇ 18ರಿಂದ ಜೂನ್ 1ರವರೆಗೆ ಡಾ.ಹರಿಹರ ಅವರ ಬಾಲಾಜಿ ರಾಮಲೀಲಾ ಮಂಡಳಿ ಪ್ರದರ್ಶನ ನೀಡಲಿದೆ.

ಈ ಹಿಂದೆ ಆಡಳಿತದಲ್ಲಿದ್ದ ಸರ್ಕಾರಗಳು ರಾಮಲೀಲಾ ನಡೆಸಲು ಉತ್ಸುಕತೆ ತೋರಿಸದ ಹಿನ್ನಲೆಯಲ್ಲಿ ರಾಮಲೀಲಾ ಪ್ರದರ್ಶನ ಅಯೋಧ್ಯೆಯಲ್ಲಿ ಕಳೆದ ಹಲವಾರು ವರ್ಷಗಳಿಂದ ನಿಂತೇ ಹೋಗಿತ್ತು. ಇದೀಗ ಯೋಗಿ ಆದಿತ್ಯನಾಥ ಅವರು ಅದನ್ನು ಮತ್ತೆ ಆರಂಭಿಸಿ ಜನರ ಶ್ಲಾಘನೆಗೆ ಪಾತ್ರರಾಗಿದ್ದಾರೆ.

## ಮಗುವನ್ನು ಮಲಗಿಸಲು ಓಂಕಾರ ಪಠಿಸಿದ ತಂದೆ: ವೀಡಿಯೋ ವೈರಲ್

ಅಮೆರಿಕಾದಲ್ಲಿ ತಂದೆಯೊಬ್ಬ ತನ್ನ ಮಗುವನ್ನು ಓಂಕಾರ ಪಠಿಸುತ್ತಾ ಮಲಗಿಸುವ ವೀಡಿಯೋವೊಂದು ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ.

ಕ್ಯಾಲಿಫೋರ್ನಿಯಾದ ಡೇನಿಯಲ್ ಎಸೆನ್‌ಮನ್ ತನ್ನ ಅಳುತ್ತಿರುವ ಹೆಣ್ಣು ಮಗು ಡಿವಿನಾಳನ್ನು ಮಲಗಿಸುವುದಕ್ಕಾಗಿ ಓಂಕಾರವನ್ನು ಪಠಿಸಿದ್ದಾನೆ. ಆತನ ಓಂಕಾರ ಕೇಳುತ್ತಾ ಕೇಳುತ್ತಾ ಮಗು ನಿದ್ರೆಗೆ ಜಾರಿದೆ. ತನ್ನ ಮತ್ತು ಮಗುವಿನ ಈ ಅಪರೂಪದ ಕ್ಷಣವನ್ನು ಆತ ವೀಡಿಯೋ ಮಾಡಿ ಫೇಸ್‌ಬುಕ್‌ನಲ್ಲಿ ಹರಿಯಬಿಟ್ಟಿದ್ದಾನೆ.ಡೇನಿಯಲ್ ವೀಡಿಯೋದತ್ತ ನೋಡಿ ಮಾತನಾಡುತ್ತಿರುವಂತೆ ಪಕ್ಕದಲ್ಲಿದ್ದ ಆತನ ಪುಟಾಣಿ ಮಗಳು ಕೂಗಲಾರಂಭಿಸುತ್ತಾಳೆ. ತಕ್ಷಣ ಆತ ಮಾತು ನಿಲ್ಲಿಸಿ ಆಕೆಯನ್ನು ನೋಡುತ್ತ ಓಂಕಾರ ಪಠಿಸುತ್ತಾನೆ. ತಕ್ಷಣ ಆಕೆ ಅಳುವುದನ್ನು ನಿಲ್ಲಿಸಿ ಆತನ ಓಂಕಾರಕ್ಕೆ ಕಿವಿಗೊಡುತ್ತಾಳೆ, ನಂತರ ನಿಧಾನಕ್ಕೆ ನಿದ್ರೆಗೆ ಜಾರುತ್ತಾಳೆ. ಈ ವೀಡಿಯೋ ಭಾರೀ ವೈರಲ್ ಆಗಿದ್ದು, 3.4 ಕೋಟಿ ಜನರು ವೀಕ್ಷಿಸಿದ್ದಾರೆ. 3.6 ಲಕ್ಷ ಶೇರ್ ಪಡೆದುಕೊಂಡಿದೆ.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.